ಇನ್ಸ್ಪೆಕ್ಟರ್ ಭೂಷಣ್ ಒಮ್ಮೆ ಅವನನ್ನು ಮೇಲಿನಿಂದ ಕೆಳಗಡೆ ನೋಡಿದ. ಸುಮಾರು ಇಪ್ಪತ್ತೈದರ ಸುಂದರ, ಸದೃಢ ಯುವಕ. ಕಷ್ಟಪಟ್ಟು ಧೈರ್ಯವಂತನಂತೆ ನಿಂತಿದ್ದರೂ ಕಣ್ಣುಗಳಲ್ಲಿ ಭಯ, ಹಣೆಯಮೇಲಿನ ಬೆವರು ಅವನಲ್ಲಿದ್ದ ದುಗುಡ ಎತ್ತಿ ತೋರಿಸುತ್ತಿತ್ತು.

“ಇವನು ಸುಳ್ಳು ಹೇಳುತ್ತಿದ್ದಾನೆ... ಇವನು ನನ್ನ ಮೇಲೆ ಒಂದು ಕಣ್ಣಿಟ್ಟಿದ್ದ. ನಾನು ಅವನಿಗೆ ಸಹಕರಿಸಲಿಲ್ಲ ಅಂತ ಹೀಗೆ ಏನೇನೋ ಸುಳ್ಳು ಕತೆ ಹೇಳುತ್ತಿದ್ದಾನೆ... ಏಯ್... ಯಾಕೋ ಹೀಗೆ ಮಾಡ್ತಿಯಾ?”

ನವೀನ್ ಹೆಂಡತಿ ಸುನಂದಾ ಚೀರುತ್ತಾ ರವಿಕಾಂತ್ ಕಡೆ ನುಗ್ಗಿದಳು. ಅವಳನ್ನು ಅಲ್ಲಿಯೇ ತಡೆಯುತ್ತಾ ಒಬ್ಬ ಲೇಡಿ ಕಾನ್ಸ್ಟೆಬಲ್, “ಈ ಹುಡುಗಿ ಜೊತೆ ನೀವು ಗಂಡಹೆಂಡತಿ ಜಗಳ ಆಡಿ, ಆಮೇಲೆ ಇಬ್ಬರೂ ಸೇರಿ ಕೊಲೆ ಮಾಡಿ, ಈಗ ಮಾಡಿಯೇ ಇಲ್ಲ ಅಂತ ನಾಟಕ ಮಾಡ್ತಾ ಇದಿರಾ?...”

ಆಶ್ಚರ್ಯದಿಂದ ಭೂಷಣ್ ಅವಳ ಕಡೆ ತಿರುಗಿದ.

“ಸರ್... ಪಕ್ಕದ ಮನೆಯಲ್ಲಿದ್ದ ಲೇಡಿ, ಮಿಸೆಸ್ ರೂಪಾ, ರಾತ್ರಿ ಹನ್ನೊಂದುವರೆ ಸುಮಾರಿಗೆ, ಇವರ ಮನೆಯಲ್ಲಿ ಯಾರೋ ಮೂವರು ಜೋರಾಗಿ ಜಗಳ ಆಡುತ್ತಿದ್ದುದನ್ನು ಕೇಳಿಸಿಕೊಂಡಿದ್ದರಂತೆ.”

“ಸೊ, ಎಲ್ಲಾ ಕ್ಲಿಯರ್... ಈ ಹುಡುಗಿ ಜೊತೆ ನೀವಿಬ್ಬರೂ ಜಗಳ ಆಡಿದ್ದೀರ. ಜಗಳ ತಾರಕ್ಕೆ ಹೋಗಿ, ಅವಳು ಹೊರಗಡೆ ಹೋಗುವಾಗ, ಇಬ್ಬರೂ ಸೇರಿ ಅವಳನ್ನು ಕೊಲೆ ಮಾಡಿದ್ದೀರಿ... ಅಕಸ್ಮಾತ್ ರವಿ ಅದನ್ನು ನೋಡಿಬಿಟ್ಟ... ಅದಕ್ಕಾಗಿ ಈ ನಾಟಕ ಆಡುತ್ತಿದ್ದೀರ... ಇಲ್ಲಿನ ಎಲ್ಲಾ ಕೆಲಸ ಮುಗಿದ ನಂತರ ನಿಮ್ಮಿಬ್ಬರನ್ನೂ ಅರೆಸ್ಟ್ ಮಾಡಲಾಗುತ್ತದೆ. ನಿಮ್ಮ ಮನೆಯನ್ನು ಈಗ ಸರ್ಚ್ ಮಾಡಿ ಅಲ್ಲಿ ಈ ಕೊಲೆಗೆ ಸಂಬಂಧಿಸಿದ ವಸ್ತುಗಳು ಸಿಕ್ಕರೆ, ಅದನ್ನು ನಿಮ್ಮ ವಿರುದ್ಧ ಸಾಕ್ಷಿಯಾಗಿ ಬಳಸಲಾಗುತ್ತದೆ.”

ತಮ್ಮ ಯಾವ ಮಾತುಗಳೂ ಸದ್ಯ ಬಚಾವ್ ಮಾಡಲಾರದು ಎಂದರಿತ ನವೀನ್ ಸುಮ್ಮನಾದ.

“ಇನ್ನೊಬ್ಬರು ಸಾಕ್ಷಿ ಇದ್ದಾರೆ ಅಂದರಲ್ಲ, ಅವರೆಲ್ಲಿ ?”

“ಸರ್ ಅವರು ದಿಲ್ ಬಾಗ್ ಸಿಂಗ್ ಅಂತ... ಸೀನಿಯರ್ ಸಿಟಿಜನ್... ಇದೆಲ್ಲ ನೋಡಿ ಅವರ ಬಿ.ಪಿ. ಜಾಸ್ತಿಯಾಗಿದೆಯಂತೆ. ಆಮೇಲೆ ಅವರೇ ಬಂದು ಹೇಳಿಕೆ ಕೊಡುತ್ತಾರೆ.”

ಕಾನ್ಸ್ಟೆಬಲ್‌ನ ಮಾತುಗಳಿಗೆ ಸರಿಯೆಂದು ತಲೆಯಾಡಿಸಿ, ಅಲ್ಲಿಯೇ ಕೈಕಟ್ಟಿ ನಿಂತಿದ್ದ ರವಿಕಾಂತನ ಬೆನ್ನು ತಟ್ಟಿ, “ವೆಲ್ ಡನ್ ಮೈ ಬಾಯ್... ನೀನು ನೋಡಿದುದರಿಂದ ಈ ಕೇಸ್ ಒಂದೇ ಕ್ಷಣದಲ್ಲಿ ಸಾಲ್ವ್ ಆಯಿತು. ಈಗ ನಮಗೇನು ಹೇಳಿಕೆ ಕೊಡ್ತಿಯೋ ಅದೇ ಹೇಳಿಕೆ ನಾಳೆ ಕೋರ್ಟ್‌ನಲ್ಲಿಯೂ ಕೊಡಬೇಕಾಗುತ್ತದೆ. ಯಾವುದೇ ಭಯ ಇಲ್ಲದೇ ಪೊಲೀಸರಿಗೆ ಸಹಾಯ ಮಾಡು. ಬ್ರೇವ್ ಮ್ಯಾನ್...” ಎಂದು ಅವನ ಬೆನ್ನುತಟ್ಟಿ ಅಲ್ಲಿಂದ ಹೊರಟ ಭೂಷಣ್.

ಅವನ ಪಾಲಿನ ಕೆಲಸ ಮುಗಿದಿತ್ತು. ಮಹಜರ್ ಮಾಡಿ, ಶವವನ್ನು ಪೋಸ್ಟ್‌ಮಾರ್ಟ್‌ಂಗೆ ಕಳುಹಿಸಿ, ಎವಿಡೆನ್ಸ್ ಕಲೆಕ್ಟ್ ಮಾಡಿದರೆ ಕೇಸ್ ಕ್ಲೋಸ್... ಕೇವಲ ಚಾರ್ಜ್‌ಶೀಟ್ ಹಾಕಬೇಕಷ್ಟೇ...

★★★

ತನ್ನ ಮುಂದಿದ್ದ ಚಹಾ ಕಪ್ಪನ್ನು ಎತ್ತಿಕೊಳ್ಳುತ್ತಾ ನವೀನ್,

“ಸರ್ ನಾವು ನಿಮ್ಮನ್ನು ಹೇಗೆ ನಂಬಿಸಬೇಕೋ ತಿಳಿಯದು. ಈಗಲೂ ಹೇಳ್ತಾ ಇದೀವಿ, ನಾವು ಈ ಕೊಲೆ ಮಾಡಿಲ್ಲ.”

ಆರೋಪಿಗಳು ಕೈಗೆ ಸಿಕ್ಕರೆಂದು ರಿಲ್ಯಾಕ್ಸ್ ಆಗಿದ್ದ. ಸಮಯ ಸುಮಾರು ಮೂರು ಗಂಟೆಯಾಗಿತ್ತು... ಈಗಲೇ ವಿಚಾರಣೆ ಮುಗಿಸಿ, ಬೆಳಗ್ಗೆ ನ್ಯಾಯಾಲಯಕ್ಕೆ ಹಾಜರುಪಡಿಸಿ,